**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.7**

**ಚಾಸಾ.15**

| | | |
|---|---|---|
| ಸಾಕ್ಷಿದಾರರ ಹೆಸರು | - | ಎಂ.ದೇವಪ್ಪ ಸಪಲಿಗ |
| ತಂದೆಯ ಹೆಸರು | - | ಕೊರಗ ಸಪಲಿಗ |
| ವಯಸ್ಸು | - | 67 ವರ್ಷ |
| ಉದ್ಯೋಗ | - | ನಿವೃತ್ತ ನೌಕರ |
| ವಿಳಾಸ | - | ಮುಂಡ್ಕೂರು. |

ದಿನಾಂಕಃ 07.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

1. ನನಗೆ ಆರೋಪಿಯ ಪರಿಚಯ ಇದೆ. ಮುಂಡ್ಕೂರು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಆರೋಪಿ ಹೂವಿನ ಅಂಗಡಿ ನಡೆಸುತ್ತಿದ್ದನು. ನಂತರ ಆತ ಹೂವಿನ ಅಂಗಡಿಯನ್ನು ಬಿಟ್ಟು ಮುಂಬೈಗೆ ಹೋಗಿರುತ್ತಾನೆ. ನಂತರ ಅಲ್ಲಿ ಆತನಿಗೆ ಮದುವೆಯಾಗಿರುತ್ತದೆ. ಆತನ ಹೆಂಡತಿ ಮನೆ ಕುಕ್ಕೆಹಳ್ಳಿಯಲ್ಲಿ ಇರುತ್ತದೆ. ನಂತರ ಆತ ಕುಕ್ಕೆಹಳ್ಳಿಯಲ್ಲಿ ವಾಸ ಮಾಡಿಕೊಳ್ಳುತ್ತಿದ್ದ. ಈ ಪ್ರಕರಣದ ನಂತರ ಈ ಪ್ರಕರಣದ ಮೃತ ಕೃತಿಕ್ ಈತನ ವಿಚಾರ ತಿಳಿಯಿತು. ಆತ ಕುಕ್ಕೆಹಳ್ಳಿಯಲ್ಲಿ ವಾಸ ಮಾಡಿಕೊಂಡಿದ್ದ. ಚಾಸಾ14 ಈತನ ಪರಿಚಯ ಇದೆ. ಸತೀಶ್ ಎನ್ನುವವ ಮೃತ ಯಶವಂತ ಈತನ ಬಾವ. ಸತೀಶನ ಹೆಂಡತಿ ಶಾರದ ಚಾಸಾ13 ಇವರ ಪರಿಚಯ ಇದೆ. ಶಾರದ ಮತ್ತು ಸತೀಶ್ ಮುಂಡ್ಕೂರಿನಲ್ಲಿ ವಾಸ ಮಾಡಿಕೊಂಡಿದ್ದರು. ಕೃತಿಕ್ ಶಾರದ ಈಕೆಯ ಮನೆಗೆ ಯಾವಾಗಲೂ ಬಂದು ಹೋಗುತ್ತಿದ್ದ ಎಂದು ಪ್ರಕರಣದ ನಂತರ ಗೊತ್ತಾಯಿತು. ಹಾಗೆ ಬರುತ್ತಿದ್ದ ಕಾರಣ ಮೃತ ಕೃತಿಕ್ ಮತ್ತು ಯಶವಂತ್ ರವರಿಗೆ ಜಗಳವಾದ ವಿಚಾರ ಗೊತ್ತಾಯಿತು. ತದನಂತರ ಮೃತ ಕೃತಿಕ್ ಶಾರದಾಳ ಮನೆಗೆ ಬರುತ್ತಿರಲಿಲ್ಲ.

2. ನಂತರ ಮೃತ ಕೃತಿಕ್ ಈತನನ್ನು ಆರೋಪಿ ಕೊಲೆ ಮಾಡಿರುವ ವಿಚಾರ ಪೇಪರ್ ನಲ್ಲಿ ಓದಿ ಗೊತ್ತಾಯಿತು. ನಂತರ ಆರೋಪಿ ಮೃತ ಕೃತಿಕ್ ನಿಂದ ಹಣ ಪಡೆದುಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ಕೊಲೆಯಾಗಿದೆ ಎಂದು ಪೇಪರ್ ನೋಡಿ ಗೊತ್ತಾಯಿತು. ಮೃತ ಕೃತಿಕ್ ಈತನ ಸಾವಿನ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿ ನನಗೆ ದೂರವಾಣಿ ಕರೆ ಮಾಡಿ ಯಾವುದೇ ವಿಚಾರ ತಿಳಿಸಿರುವುದಿಲ್ಲ. ಆರೋಪಿ ಮುಂಡ್ಕೂರಿನಲ್ಲಿ ಹೂವಿನ ಅಂಗಡಿ ವ್ಯಾಪಾರ ಮಾಡುತ್ತಿದ್ದ ಸಮಯದಲ್ಲಿ ಸಾಲ ಮಾಡಿ, ಸಾಲ ತೀರಿಸದೇ ಊರಿನವರಿಗೆ ಮೋಸ ಮಾಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದ</u>**

1. ಆರೋಪಿ ಮುಂಡ್ಕೂರು ದೇವಸ್ಥಾನದ ಬಳಿ ಹೂವಿನ ಅಂಗಡಿ ನಡೆಸುತ್ತಿದ್ದಾಗ ಊರಿನವರೊಂದಿಗೆ ಸಾಲ ಮಾಡಿ ವಾಪಾಸ್ಸು ನೀಡದೇ ಮೋಸ ಮಾಡಿ ಸಾಲ ನೀಡಿದವರು ಮೋಸ ಹೋಗಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 14-09-2022 ರಂದು ಬೆಳಿಗ್ಗೆ 8-30 ಗಂಟೆಗೆ ಆರೋಪಿ, ಯಶವಂತ ಇವರ ಮೊಬೈಲಿಗೆ ಕರೆ ಮಾಡಿ ಕೃತಿಕ್ ಸುಸೈಡ್ ಮಾಡಿಕೊಂಡಿದ್ದಾನೆ, ಶಾರದಾಳ ಹೆಸರಿನಲ್ಲಿ ಪತ್ರ ಬರೆದಿಟ್ಟಿರುತ್ತಾನೆ, ಶಾರದಾಳ ವಿಚಾರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನುವ ವಿಚಾರವನ್ನು ಯಶವಂತ ನನಗೆ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ.

2.ಆರೋಪಿ ಕೃತಿಕನಿಗೆ ಮದುವೆಯಾಗಲು ಹುಡುಗಿ ನೋಡುವಂತೆ ಒತ್ತಾಯಿಸಿದ್ದು, ಆ ಬಗ್ಗೆ ಪೋಟೋ ಕಳುಹಿಸು ಎಂದು ಕೃತಿಕನಿಗೆ ಹೇಳಿ ಪೋಟೋ ತೆಗೆಯುವಾಗ ಬಂಗಾರದ ಆಭರಣಗಳನ್ನು ಧರಿಸಬೇಕು ಅದಕ್ಕಾಗಿ ಲಾಕರ್ ನಲ್ಲಿದ್ದ ಚಿನ್ನವನ್ನು ತಂದು ಪೋಟೋ ತೆಗೆಯಬೇಕು, ಪೋಟೋ ತೆಗೆದ ಮೇಲೆ ಆತ್ಮಹತ್ಯೆಯ ವೀಡಿಯೋ ಮಾಡಬೇಕು ಎಂದು ಕೃತಿಕನಲ್ಲಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪೋಲಿಸರು ಆರೋಪಿಯ ಮೊಬೈಲನ್ನು ವಶಪಡಿಸಿಕೊಂಡಾಗ ಆರೋಪಿಯ ಈ ಕೊಲೆ ಕೃತ್ಯದ ಬಗ್ಗೆ ಯೋಜನೆ ರೂಪಿಸಿದ ಸಂಭಾಷಣೆ ಇತ್ತು

ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರಲ್ಲಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿರುವ ಹೇಳಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದ**

ಪ್ರಕರಣದ ಯಾವುದೇ ವಿಚಾರ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ